


ಕರೀಮ್ ಬೆಂಕಿಯಿಂದ ಕುಡಗೋಲನ್ನು ಎತ್ತಿ ಅಡಿಗಲ್ಲಿನ ಮೇಲೆ ಇಟ್ಟಾಗ ಸುತ್ತಿಗೆಯಿಂದ ಅದರ ಮೇಲೆ ಹೊಡೆಯಬೇಕಾಗಿತ್ತು. ಕುಲುಮೆಯ ಮಾಲೀಕ ಜಲೀಲ್ ಇಬ್ಬರಿಗೂ ಸಾಧ್ಯವಾದಷ್ಟು ಹೇಳಿಕೊಟ್ಟ. ಕರೀಮ್ ಪಾತ್ರ ಮಾಡಿದ್ದ ಮದನ್‌ಕುಮಾರ್ ಐದಾರು ಟೇಕ್‌ನಲ್ಲಿ ಹೇಗೋ ಒಂದು ಮಾಡಿ ಮುಗಿಸುತ್ತಿದ್ದರು. ಆದರೆ, ಬಾಲ ನಟ ನಿತಿನ್ ಸರಳವಾದ ಕೆಲಸವನ್ನೂ ಸರಿಯಾಗಿ ಮಾಡದೇ ಟೇಕ್ ಮೇಲೆ ಟೇಕ್ ತೆಗೆದುಕೊಳ್ಳುತ್ತಿದ್ದ. ಒಮ್ಮೆ ಅವರು ಸುತ್ತಿಗೆಯನ್ನು ಅಡಿಗಲ್ಲಿನ ಮೇಲೆ ಹೊಡೆಯದೇ ನೆಲದ ಮೇಲೆ ಹೊಡೆದದ್ದನ್ನು ನೋಡಿ ಸ್ವಲ್ಪ ದೂರ ನಿಂತಿದ್ದ ಶಿವು ಜೋರಾಗಿ ನಕ್ಕಿದ್ದ. ನಿರ್ದೇಶಕ ಕೆಂಡಾಮಂಡಲವಾಗಿದ್ದಕ್ಕೆ ಚಂದ್ರು ಶಿವುವನ್ನು ಬಯ್ದಿದ್ದ. ಆದರೂ ಆತನನ್ನು ದೂರ ತಳ್ಳಲು ಸಾಧ್ಯವಿರಲಿಲ್ಲ; ಏಕೆಂದರೆ ಆತನ ಒಂದು ಪ್ರಾಪರ್ಟಿ, ಬಡ ಹುಡುಗನ ಅಥೆಂಟಿಕ್ ಅಂಗಿ, ಈತನ ಬಳಿ ಇತ್ತಲ್ಲ. ಅಷ್ಟರಲ್ಲಿ ಲಂಚ್ ಬ್ರೇಕ್ ಘೋಷಣೆಯಾಯಿತು. ಊಟ ಬಂದಿತ್ತು. ಮದನ್‌ರಾಜ್, ನಿತಿನ್, ಆತನ ತಾಯಿ, ನಿರ್ದೇಶಕ ರವಿರಾಜ್ ಅವರಿಗೆಲ್ಲಾ ಪಕ್ಕದ ಒಬ್ಬರ ಮನೆಯಲ್ಲಿ ವ್ಯವಸ್ಥೆ ಮಾಡಿದ್ದರು. ಉಳಿದವರು ಅಲ್ಲಿದ್ದ ಕೆಲವು ಮರಗಳ ಕೆಳಗೆ ಊಟ ಮಾಡಿದರು. ಕುಲುಮೆಯಲ್ಲಿ ನೆರಳಿತ್ತು, ಆದರೂ, ಅಲ್ಲಿ ಇವರೆಲ್ಲಾ ಓಡಾಡಿ ತುಳಿದಾಡಿ ಬಿಟ್ಟರೆ ಸೀನ್ ಕಂಟಿನ್ಯುಯಿಟಿ ಹಾಳಾಗುತ್ತದೆ ಎಂದು ಅದನ್ನು ನಿಷೇಧಿಸಲಾಗಿತ್ತು.

ಇಷ್ಟೆಲ್ಲಾ ಗಡಿಬಿಡಿ ಗೌಜಿಯಲ್ಲೂ ಚಂದ್ರು ಶಿವುಅನ್ನು ಮರೆತಿರಲಿಲ್ಲ. ಅವನನ್ನೂ ತನ್ನ ಜೊತೆ